# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 1203 |
| **ಸದಸ್ಯರ ಹೆಸರು** | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 23.12.2021 |

| ಕ್ರಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ. | ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ಕುದೂರು ಹೋಬಳಿಯ ಶ್ರೀಗಿರಿಪುರ ಗ್ರಾಮಕ್ಕೆ ಸೇರಿರುವ ಮಲ್ಲಪ್ಪನಹಳ್ಳಿ ಕೆರೆಯ ಸರ್ವೇ ನಂ.88 ರಲ್ಲಿ 65 ಎಕರೆ ವಿಸ್ತೀರ್ಣ ಇರುವ ಕೆರೆಯನ್ನು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಒತ್ತುವರಿಯಾಗಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಬಂದಿರುವುದಿಲ್ಲ. |
| ಆ. | ಬಂದಿದ್ದಲ್ಲಿ,ಎಷ್ಟು ಎಕರೆ ಒತ್ತುಆಗಿದೆ; ಒತ್ತುವರಿದಾರರು ಯಾರು;(ಮಾಹಿತಿ ನೀಡುವುದು) | ಆದಾಗ್ಯೂ, ಕುದೂರು ಹೋಬಳಿ ಶ್ರೀಗಿರಿಪುರ ಗ್ರಾಮದ ಸರ್ವೇ ನಂ.88 ರಲ್ಲಿ 65-36 ಇಕರೆ/ಗುಂಟೆ ವಿಸ್ತೀರ್ಣವಿದ್ದು, ಸಂಪೂರ್ಣವಾಗಿ ನೀರಿನಿಂದ ತುಂಬಿರುತ್ತದೆ. ತಾಲ್ಲೂಕು ಸರ್ವೇ ಮತ್ತು ಭೂಮಾಪನ ಇಲಾಖೆವತಿಯಿಂದ ಕೆರೆಯ ವಿಸ್ತೀರ್ಣವನ್ನು ಹದ್ದುಬಸ್ತುಗೊಳಿಸಿ ಕೆರೆ ಒತ್ತುವರಿಯಾಗಿರುವುದು ಕಂಡುಬಂದಲ್ಲಿ ಸೂಕ್ತ ಕ್ರಮ ವಹಿಸಲಾಗುವುದು. |
| ಇ. | ಒತ್ತುವರಿ ತೆರವುಗೊಳಿಸಿ ಈ ಕೆರೆಯನ್ನು ರಕ್ಷಣೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | |
| ಈ. | ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಕುದೂರು ಹೋಬಳಿಯ ಶ್ರೀಗಿರೀಪುರ ಹಾಗೂ ವೀರಸಾಗರ ಗ್ರಾಮಗಳ ಮಧ್ಯೆ ಇರುವ ಹೊಸಕೆರೆಯ ವಿಸ್ತೀರ್ಣ ಹಾಗೂ ಇತರೆ ಪೂರ್ಣ ಮಾಹಿತಿಯನ್ನು ನೀಡುವುದು? | ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಕುದೂರು ಹೋಬಳಿ ಶ್ರೀಗಿರಿಪುರ ಹಾಗೂ ವೀರಸಾಗರ ಗ್ರಾಮಗಳ ಮಧ್ಯೆ ಇರುವ ಹೊಸಕೆರೆಯು ಸಣ್ಣ ನೀರಾವರಿ ಮತ್ತು ಅಂತರ್ಜಲ ಇಲಾಖೆಯ ಉಸ್ತುವಾರಿಯಲ್ಲಿದ್ದು, ಸದರಿ ಕೆರೆಯ ಅಂಗಳವು 10.80 ಹೆಕ್ಟೇರ್ ಮತ್ತು 54.63 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಇರುತ್ತದೆ. ಎಡದಂಡೆ ನಾಲೆಯ 1.1 ಕಿ.ಮೀ. ಮತ್ತು ಬಲದಂಡೆ ನಾಲೆ 0.43 ಕಿ.ಮೀ. ಉದ್ದವಿರುತ್ತದೆ. ಏರಿಯ ಮೇಲಿನ ಅಗಲ 2.00 ಇದ್ದು, ಉದ್ದ 370 ಮೀ. ಇರುತ್ತದೆ. |

ಸಂಖ್ಯೆ: ಗ್ರಾಅಪ:15ನೇವಿಸ:146:ಆರ್.ಆರ್.ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು



Generated from eOffice by RAMESH .D.O, RDPR-DD(RDO), DEPUTY DIRECTOR, RDPR SEC on 23/12/2021 07:43 PM